
ಬೆಳವಣಿಗೆಯನ್ನು ನಿಯಂತ್ರಿಸುವ ಕೆಲಸವನ್ನು ಮಾಡುತ್ತದೆ. ಸ್ಟೀರಾಯ್ಡ್‌ಗಳು ಮಾತ್ರೆ, ಇಂಜೆಕ್ಷನ್, ಇನ್‌ಹೇಲರ್ (ಬಾಯಿ ಅಥವಾ ಮೂಗಿನ ಮುಖಾಂತರ) ಮತ್ತು ಮುಲಾಮ್, ಜೆಲ್, ಕ್ರೀಮ್ ಮುಂತಾದ ರೂಪದಲ್ಲಿ ಸಿಗುತ್ತದೆ.

ಸ್ಟೀರಾಯ್ಡ್ ಮುಖ್ಯವಾಗಿ ದೇಹದಲ್ಲಿನ ಅತಿಯಾದ ಉರಿಯೂತವನ್ನು ಕಡಮೆ ಮಾಡುತ್ತವೆ ಮತ್ತು ದೇಹದ ರಕ್ಷಣಾ ವ್ಯವಸ್ಥೆಯನ್ನು ನಿಯಂತ್ರಿಸುವಲ್ಲಿ ಮುಖ್ಯ ಪಾತ್ರ ವಹಿಸುತ್ತದೆ. ಈ ಕಾರಣದಿಂದಲೇ ಈ ಸ್ಟೀರಾಯ್ಡ್‌ನ್ನು ಹಲವಾರು ರೋಗಗಳ ಚಿಕಿತ್ಸೆಗಾಗಿ ಬೇರೆ ಬೇರೆ ರೂಪದಲ್ಲಿ ಬೇರೆ ಬೇರೆ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಆಸ್ತಮಾ, ಅಲರ್ಜಿ, ಶ್ವಾಸಕೋಶ ಸಂಬಂಧಿ ರೋಗಗಳು (ಅತಿಯಾಗಿ ಉರಿಯೂತದಿಂದಾಗುವ) ರುಮಾಟಿಕ್ ಆರ್ಥ್ರೈಟಿಕ್, ರುಮಾಟಿಕ್ ಜ್ವರ, ಸ್ನಾಯುಗಳು ಮತ್ತು ಗಂಟುಗಳ ಉರಿಯೂತ, ಕ್ರೋನ್ಸ್ ರೋಗ, ಅಡಿಸನ್ಸ್ ರೋಗ, ಅಲ್ಸರೇಟಿವ್ ಕೊಲೈಟಿಸ್ ಎಂಬ ಕರುಳಿಗೆ ಸಂಬಂಧಿಸಿದ ರೋಗ, ಮಲ್ಟಿಪಲ್ ಸ್ಲೀರೋಸಿಸ್ ಎಂಬ ನರಸಂಬಂಧಿ ರೋಗ ಹೀಗೆ ಮತ್ತು ಹಲವು ರೋಗಗಳಲ್ಲಿ ರೋಗವನ್ನು ನಿಯಂತ್ರಿಸಲು ಬಳಸುತ್ತಾರೆ. ಹಲವಾರು ಸಂದರ್ಭಗಳಲ್ಲಿ ರೋಗವನ್ನು ಸಂಪೂರ್ಣವಾಗಿ ಗುಣಪಡಿಸಲಾಗದಿದ್ದರೂ, ರೋಗವನ್ನು ಹತೋಟಿಯಲ್ಲಿಡಲು ಸ್ಟೀರಾಯ್ಡ್‌ನ್ನು ಜೀವನ ಪರ್ಯಂತ ಉಪಯೋಗಿಸಬೇಕಾಗುವ ಅನಿವಾರ್ಯತೆಯೂ ಇರುತ್ತದೆ.



### ಸ್ಟೀರಾಯ್ಡ್ ಬಳಕೆಯಿಂದ ತೊಂದರೆಗಳೇನು?

ಸ್ಟೀರಾಯ್ಡ್ ಔಷಧಿ ಹಲವಾರು ಸಂದರ್ಭಗಳಲ್ಲಿ ರೋಗಿಯನ್ನು ಪ್ರಾಣದಂಚಿನಿಂದ ಪಾರು ಮಾಡುವ 'ಸಂಜೀವಿನಿ' ಯಾಗಿದ್ದರೂ ಅನಗತ್ಯ ಮತ್ತು ಅತಿಯಾದ ಬಳಕೆಯಿಂದ ಖಳನಾಯಕನಂತೆ ಈಗೀಗ ಕಂಡು ಬಂದಿರುವುದು ಸೋಜಿಗ. ತೀವ್ರತರದ ಆಸ್ತಮಾ ಅಥವಾ ಅಲರ್ಜಿಯಿಂದಾದ ಶಾಕ್‌ನಲ್ಲಿ ಜೀವರಕ್ಷಕವಾಗುವ ಸ್ಟೀರಾಯ್ಡ್‌ನ್ನು ಇತ್ತೀಚಿಗೆ ಸಣ್ಣ ಪುಟ್ಟ ಜ್ವರಗಳಿಗೂ ರೋಗ ತಕ್ಷಣ ಗುಣವಾಗಲೆಂದು 'ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ'ದಂತೆ ಬಳಸುವ ಕಾರಣದಿಂದಲೇ ಅನಗತ್ಯವಾಗಿ 'ವಿಲನ್'ನಾಗಿ ಬದಲಾಗಿರುವುದು ವಿಪರ್ಯಾಸದ ವಿಚಾರ. ಗ್ರಾಮೀಣ ಪ್ರದೇಶಗಳಲ್ಲಿ, ದಿಢೀರ್ ಪ್ರಸಿದ್ಧಿ ಹೊಂದಲು, ವೈದ್ಯರಂತೆ ಸೋಗು ಹಾಕುವ ನಯವಂಚಕರು, ಮುಗ್ಧ ಅಮಾಯಕ ರೋಗಿಗಳಿಗೆ ಜ್ವರವಿರಲಿ ಕೆಮ್ಮಿರಲಿ, ತಲೆನೋವೇ ಬರಲಿ, ಜ್ವರ ನೋವಿನ ಔಷಧಿ ಜೊತೆಗೆ ಒಂದಷ್ಟು ಸ್ಟೀರಾಯ್ಡ್ ಔಷಧಿ, ಬೆರೆಸಿ ತಕ್ಷಣ ಕಾಯಿಲೆ ವಾಸಿ ಮಾಡಿ ರೋಗಿಯನ್ನು ಕಾಯಿಲೆಯ ಹಂದರವಾಗಿ ಮಾಡುವುದು ಬಹಳ ನೋವಿನ ಸಂಗತಿ.

ಸಾಮಾನ್ಯವಾಗಿ ಸ್ಟೀರಾಯ್ಡ್‌ನ್ನು ಅತೀ ಕಡಿಮೆ ಪ್ರಮಾಣದಲ್ಲಿ, ಅತ್ಯಂತ ಕಡಿಮೆ ಅವಧಿಗೆ ಬಳಸಲಾಗುತ್ತದೆ. ಕಡಿಮೆ ಅವಧಿಗೆ ಬಳಸುವ ಸ್ಟೀರಾಯ್ಡ್ ಇಂಜೆಕ್ಷನ್, ಇನ್‌ಹೇಲರ್ ಮತ್ತು ಮಾತ್ರೆಯಿಂದ ಯಾವುದೇ ತೊಂದರೆ ಉಂಟಾಗುವುದಿಲ್ಲ. ಆದರೆ ಅಧಿಕ ಪ್ರಮಾಣದಲ್ಲಿ ಅನಗತ್ಯವಾಗಿ ಅತಿಯಾದ ಅವಧಿಗೆ ಬಳಸಿದಲ್ಲಿ ದೇಹದ ಎಲ್ಲ ಅಂಗಗಳನ್ನು ಸ್ಟೀರಾಯ್ಡ್ ಬಲಿ ತೆಗೆದುಕೊಂಡು ರೋಗಿಯನ್ನು ಶಾಶ್ವತವಾಗಿ ರೋಗಗಳ ಹಂದರವಾಗಿ ಮಾಡುವುದು ಮಾತ್ರ ಸತ್ಯ. ಅತಿಯಾದ ಬಳಕೆಯಿಂದ ಹಸಿವು ಹೆಚ್ಚಿಸಿ, ದೇಹದ ತೂಕ ಹೆಚ್ಚುತ್ತದೆ. ದೇಹದಲ್ಲಿ ಚರ್ಮ ತೆಳ್ಳಗಾಗುವುದು, ಮುಖದಲ್ಲಿ ಸೆಬಾಷಿಯಸ್ ಗ್ರಂಥಿಗಳು ಹೇರಳವಾಗಿ ಮೊಡವೆಗಳು ಜಾಸ್ತಿಯಾಗುತ್ತದೆ. ದೇಹದ ರಕ್ಷಣಾ ವ್ಯವಸ್ಥೆ ಕುಸಿದು ಸೋಂಕಿಗೆ ತುತ್ತಾಗುವ ಸಾಧ್ಯತೆ ಹೆಚ್ಚಾಗುತ್ತದೆ. ಮೂಡ್ ಬದಲಾವಣೆ, ಮಾನಸಿಕವಾಗಿ ಬಳಲುವುದು, ಖಿನ್ನತೆ ಉಂಟಾಗಬಹುದು, ಮಧುಮೇಹ, ಹೃದಯ ವೈಕಲ್ಯ ಮತ್ತು ರಕ್ತದೊತ್ತಡ ಸಾಧ್ಯತೆ ಇರುತ್ತದೆ. ಹೊಟ್ಟೆಯಲ್ಲಿ ಹುಟ್ಟಾಗುವ ಸಾಧ್ಯತೆ ಅತಿಯಾಗಿರುತ್ತದೆ. ಎಲುಬುಗಳು ಟೊಳ್ಳಾಗಿದ್ದ ಅಸ್ಥಿರಂಧ್ರತೆ ಉಂಟಾಗಿ ಮೂಳೆ ಮುರಿಯುವ ಸಾಧ್ಯತೆ ಇರುತ್ತದೆ. ದಿಡೀರ್ ಅಪಸ್ಮಾರ ರೋಗ ಬರಬಹುದು. ಅಪಸ್ಮಾರದ ತೀವ್ರತೆ ಮತ್ತಷ್ಟು ಜಾಸ್ತಿಯಾಗಬಹುದು. ಕಣ್ಣಿನ ಪೊರೆ, ಗ್ಲುಕೋಮಾ ರೋಗ ಬರುವ ಸಾಧ್ಯತೆ ಇರುತ್ತದೆ. ವೈದ್ಯರ ಸಲಹೆಯಂತೆ ಉಪಯೋಗಿಸಿದರೂ ಕೆಲವೊಮ್ಮೆ ಮುಖ ಊದಿಕೊಳ್ಳುವುದು, ಹೊಟ್ಟೆ ಕೈಕಾಲುಗಳಲ್ಲಿ ನೀರು ತುಂಬಿಕೊಳ್ಳುವುದು ಮುಂತಾದ ತೊಂದರೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ.

### ಬಳಸುವಾಗ ಎಚ್ಚರ ಇರಲಿ

ಸ್ಟೀರಾಯ್ಡ್ ಬಳಕೆಯ ಅವಧಿ, ಪ್ರಮಾಣ ಮತ್ತು ಉದ್ದೇಶ ಇವುಗಳನ್ನು ನಿಮ್ಮ ವೈದ್ಯರೇ ನಿರ್ಧರಿಸುತ್ತಾರೆ. ಯಾವುದೇ ಕಾರಣಕ್ಕೂ ಸ್ವಯಂ ಔಷಧಿ ಪ್ರಯೋಗ ಬೇಡ. ವೈದ್ಯರು ನೀಡಿದ ಔಷಧಿಯನ್ನು ಅದೇ ಪ್ರಮಾಣದಲ್ಲಿ ಅಷ್ಟೇ ಅವಧಿಗೆ ತೆಗೆದುಕೊಳ್ಳಬೇಕು. ವೈದ್ಯರ ಸಲಹೆ ಇಲ್ಲದೆ ಖಂಡಿತವಾಗಿಯೂ ಸ್ಟೀರಾಯ್ಡ್ ಸೇವನೆ ಮಾಡಲೇಬಾರದು.

ಅದೇ ರೀತಿ ವೈದ್ಯರ ಸಲಹೆ ಇಲ್ಲದೆ, ಮುನ್ಸೂಚನೆ ಇಲ್ಲದೆ ಸ್ಟೀರಾಯ್ಡ್ ಬಳಕೆಯನ್ನು ನಿಲ್ಲಿಸಬಾರದು. ಸ್ಟೀರಾಯ್ಡ್ ಪ್ರಮಾಣವನ್ನು ನಿಯಮಿತವಾಗಿ ಕಡಿಮೆ ಮಾಡಿ ನಿಧಾನವಾಗಿ ನಿಲ್ಲಿಸಬೇಕು. ಇಲ್ಲವಾದಲ್ಲಿ ಖಿನ್ನತೆ, ನರಗಳ ದೌರ್ಬಲ್ಯ ಮತ್ತು ರಕ್ತದೊತ್ತಡ ಕಡಿಮೆಯಾಗಿ ಜೀವಕ್ಕೆ ಸಂಚಕಾರ ಬರಬಹುದು.

ಸ್ಟೀರಾಯ್ಡು ಔಷಧಿ ಬೇರೆ ಔಷಧಿಗಳ ಜೊತೆ ಸರಿಯಾಗಿ ಹೊಂದಿಕೊಳ್ಳದೆ, ಬೇರೆ ಔಷಧಿಗಳ ಕಾರ್ಯದಕ್ಷತೆಯನ್ನು ಹಿಗ್ಗಿಸುವ ಅಥವಾ ಕುಗ್ಗಿಸುವ ಸಾಧ್ಯತೆ ಇದೆ. ಹೃದಯದ ತೊಂದರೆ, ಲಿವರ್‌ನ ತೊಂದರೆ ಮತ್ತು ಅಧಿಕ ರಕ್ತದೊತ್ತಡ ಇರುವ ವ್ಯಕ್ತಿಗಳಲ್ಲಿ ಸ್ಟೀರಾಯ್ಡ್ ಅತ್ಯಂತ ಜಾಗರೂಕತೆಯಿಂದ ಬಳಸತಕ್ಕದ್ದು. ವೈದ್ಯರ ಮಾರ್ಗದರ್ಶನವನ್ನು ಚಾಚೂ ತಪ್ಪದೆ ಪಾಲಿಸಬೇಕು.

ಸ್ಟೀರಾಯ್ಡ್ ಬಳಕೆಯ ಸಂದರ್ಭದಲ್ಲಿ ದೇಹದ ರಕ್ಷಣಾ ವ್ಯವಸ್ಥೆ ಕುಸಿಯುವುದರಿಂದ ವ್ಯಕ್ತಿಗೆ ಸೋಂಕು ತಗಲುವ ಸಾಧ್ಯತೆ ಹೆಚ್ಚು. ಹೀಗಾಗಿ ಅತ್ಯಂತ ಜಾಗರೂಕರಾಗಿ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಇಲ್ಲವಾದಲ್ಲಿ ಸಾಮಾನ್ಯ ಸೋಂಕು ಕೂಡ ಮಾರಣಾಂತಿಕವಾಗಿ ಪರಿಣಮಿಸುವ ಅಪಾಯ ಇದೆ.

ಮಾನಸಿಕ ತೊಂದರೆ ಇರುವವರು, ಸ್ಥೂಲಕಾಯದವರು, ಕರುಳಿನ ತೊಂದರೆ ಇರುವವರು, ಥೈರಾಯ್ಡ್ ತೊಂದರೆ ಇರುವವರು, ಅಪಸ್ಮಾರ ರೋಗಿಗಳು, ಮಧುಮೇಹ ರೋಗಿಗಳು, ಗ್ಲುಕೋಮ ರೋಗಿಗಳು ಸ್ಟೀರಾಯ್ಡ್ ಬಳಸುವಾಗ ಅತ್ಯಂತ ಜಾಗರೂಕರಾಗಿರಬೇಕು. ವೈದ್ಯರ ಸಲಹೆ ಮತ್ತು ಸೂಚನೆ ಅಚ್ಚುಕಟ್ಟಾಗಿ ಪಾಲಿಸಲೇಬೇಕು.

ಮಹಿಳೆಯರು ಗರ್ಭಧಾರಣೆ ಮತ್ತು ಬಾಣಂತಿಯಾಗಿದ್ದಾಗ ಮೊಲೆಯೂಡಿಸುವ ಸಮಯದಲ್ಲಿ ಸ್ಟೀರಾಯ್ಡ್ ತೆಗೆದುಕೊಳ್ಳುವುದರಲ್ಲಿ ಏನೂ ತೊಂದರೆ ಇಲ್ಲದಿದ್ದರೂ, ವೈದ್ಯರ ಅನುಮತಿ ಇಲ್ಲದೆ ಯಾವುದೇ ಕಾರಣಕ್ಕೂ ಸೇವಿಸಬಾರದು.

ರಕ್ತ ಹೆಪ್ಪುಗಟ್ಟದಿರಲು ಬಳಸುವ ಔಷಧಿಗಳು, ಅಪಸ್ಮಾರ ಬರದಂತೆ ಬಳಸುವ ಔಷಧಿಗಳು ಮತ್ತು ಮಧುಮೇಹದ ಔಷಧಿಗಳ ಜೊತೆ ಸ್ಟೀರಾಯ್ಡ್ ಬಳಸುವಾಗ ಬಹಳ ಎಚ್ಚರಿಕೆಯಿಂದಿರಬೇಕು. ಯಾಕೆಂದರೆ ಸ್ಟೀರಾಯ್ಡ್ ಈ ಔಷಧಿಗಳ ಜೊತೆಗೆ ಸ್ಪರ್ಧೆ ನಡೆಸಿ, ಔಷಧಿಗಳ ಕಾರ್ಯದಕ್ಷತೆಯನ್ನು ಹೆಚ್ಚುಗೊಳಿಸಬಹುದು ಅಥವಾ ಕುಂಠಿತಗೊಳಿಸಬಹುದು. ಈ ಕಾರಣದಿಂದ ವೈದ್ಯರ ಸಲಹೆ ಸೂಚನೆ ಅತೀ ಅಗತ್ಯ.

(ಲೇಖಕರು ಮಂಜೇಶ್ವರ ಸಮೀಪದ ಹೊಸಂಗಡಿಯಲ್ಲಿ ದಂತ ವೈದ್ಯರು.
ಸಂಪರ್ಕ: 98451 35787)